**ದಿ:20.11.2019ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಮುಖ್ಯವಿಚಾರಣೆ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ:-**

1 ನೇ ಆರೋಪಿತ ತನ್ನ ಜೇಬಿನಲ್ಲಿದ್ದ ಹಣವನ್ನು ನಮ್ಮ ಜೀಪಿನ ಮೇಲೆ ಹಾಕಿ, ತಮ್ಮ ಲಾರಿಯನ್ನು ತಡೆಯದಂತೆ ಮತ್ತು ಆ ಹಣವನ್ನು ನಾವು ಹಂಚಿಕೊಳ್ಳುವಂತೆ ಹೇಳಿರುತ್ತಾನೆ.

ಪೊಲೀಸರಿಗೆ ದೂರನ್ನು ನೀಡಿದ ನಂತರ ಪ್ರಾಸಾ-2 ಮತ್ತು 3 ರವರನ್ನು ಕನಕಪುರದ ಸರ್ಕಾರಿ ಆಸ್ಪತ್ರೆಗೆ ಚಿಕಿತ್ಸೆಗಾಗಿ ಕರೆದುಕೊಂಡು ಹೋಗಿರುತ್ತೇವೆ.

ಸದರಿ ಹಣ ಮತ್ತು ಮೊಬೈಲ್ ಅವಶೇಷಗಳನ್ನು ನೋಡಿದರೆ ಗುರುತಿಸುತ್ತೇನೆ. ಸದರಿ ಹಣದಲ್ಲಿ ರೂ.500/- ಮುಖಬೆಲೆಯ 8 ನೋಟುಗಳ ಕಲರ್ ಜೆರಾಕ್ಸ್ ಗಳನ್ನು ಮತ್ತು ರೂ. 100 ಮುಖಬೆಲೆಯ 2 ನೋಟುಗಳನ್ನು ಹಾಗೂ ಮೊಬೈಲ್ ಅವಶೇಷಗಳನ್ನು ಈಗ ನ್ಯಾಯಾಲಯದ ಖಜಾನೆ ಪೆಟ್ಟಿಗೆಯಿಂದ ತೆರೆದು ಸಾಕ್ಷಿಗೆ ತೋರಿಸಲಾಗಿ ಸಾಕ್ಷಿಯು ಅವುಗಳನ್ನು ಗುರುತಿಸಿರುತ್ತಾರೆ. ಸದರಿ 8 ನೋಟುಗಳ ಕಲರ್ ಜೆರಾಕ್ಸ್ ಗಳು ಮತ್ತು ರೂ.100 ಮುಖಬೆಲೆಯ 2 ನೋಟುಗಳನ್ನು ಎಂಒ-1 ಎಂದು ಮತ್ತು ಮೊಬೈಲ್ ಅವಶೇಷಗಳನ್ನು ಎಂಒ-2 ಎಂದು ಗುರುತಿಸಲಾಯಿತು. (ರೂ.500/- ಮುಖಬೆಲೆಯ 8 ನೋಟುಗಳು ಹಣದ ಅಮಾನ್ಯಕರಣಯಾಗಿರುವುದರಿಂದ ಅವುಗಳನ್ನು ಸರ್ಕಾರಕ್ಕೆ ಸಲ್ಲಿಸಿ, ಅವುಗಳ ಜೆರಾಕ್ಸ್ ಪ್ರತಿಗಳನ್ನು ನ್ಯಾಯಾಲಯದ ಖಜಾನೆ ಪೆಟ್ಟಿಗೆಯಲ್ಲಿ ಇಡಲಾಗಿದೆ).

ಆರೋಪಿತರು ಬಳಸಿದ ಲಾರಿ ಮತ್ತು ಕ್ವಾಲಿಸ್ ವಾಹನವನ್ನು ನೋಡಿದರೆ ಗುರುತಿಸುತ್ತೇನೆ. ಸದರಿ ಲಾರಿಯ 4 ಭಾವಚಿತ್ರಗಳನ್ನು ನಿಪಿ-4 ರಿಂದ 7 ಎಂದು, ಸದರಿ ಕ್ವಾಲಿಸ್ ವಾಹನದ ಮೂರು ಭಾವಚಿತ್ರಗಳನ್ನು ನಿಪಿ-8 ರಿಂದ 10 ಎಂದು ಗುರುತಿಸಲಾಯಿತು.

## <u>ಪಾಟೀ ಸವಾಲು ಶ್ರೀ ಎಸ್.ಡಿ ಆರೋಪಿ ಪರ ವಕೀಲರಿಂದಃ-</u>

ನನ್ನ ದೂರಿನಲ್ಲಿ ದಿ.**03.03.2012** ಎಂದು ಬರೆದಿರುತ್ತೇನೆ. ಘಟನೆಯ ವೇಳೆಗೆ ನಾನು ಕನಕಪುರ ವಲಯದ ಉಪವಲಯ ಅರಣ್ಯಾಧಿಕಾರಿಯಾಗಿದ್ದೇನು. ಆದೇ ವಲಯದಲ್ಲಿ ಪ್ರಾಸಾ-**2** ರವರು ಜೀಪ್ ಚಾಲಕರಾಗಿ ಮತ್ತು ಪ್ರಾಸಾ-**3** ರವರು ಉಪವಲಯ ಅರಣ್ಯಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದರು.

ಈ ಪ್ರಕರಣ ದಾಖಲಾಗುವ ವರೆಗೂ ಆರೋಪಿತರ ವಿರುದ್ದ ಯಾವುದೇ ದೂರು ನಮಗೆ ಬಂದಿರಲಿಲ್ಲ. ಕನಕಪುರ ವಲಯದಲ್ಲಿ ಅಕ್ರಮ ಗಣಿಗಾರಿಕೆ ನಡೆಯುತ್ತಿದೆ ಎಂಬ ಬಗ್ಗೆ ನನ್ನ ಮೇಲಾಧಿಕಾರಿಗಳು ನನಗೆ ಲಿಖಿತವಾಗಿ ಮಾಹಿತಿ ನೀಡಿರುವುದಿಲ್ಲ. ಈ ಪ್ರಕರಣ ದಾಖಲಾಗುವವರೆಗೂ ಆರೋಪಿತರು ಗಣಿಗಾರಿಕೆ ಮಾಡುತ್ತಿದ್ದುದ್ದನ್ನು ನಾನು ಖುದ್ದಾಗಿ ನೋಡಿರುವುದಿಲ್ಲ.

ನಾನು ದೂರನ್ನು ನೀಡುವ ವೇಳೆಗೆ ಕನಕಪುರ, ಕಸಬಾ, ಏರಂದಪ್ಪನಹಳ್ಳಿ, ಬಾಚಹಳ್ಳಿ, ನಾರಾಯಣಪುರ, ಕೋಡಿಹಳ್ಳಿ, ಹುಣಸನಹಳ್ಳಿಗಳಲ್ಲಿ ಕಲ್ಲಿನ ಗಣಿಗಾರಿಕೆ ನಡೆಯುತ್ತಿತ್ತು. ಆ ಊರುಗಳೆಲ್ಲವು ನಮ್ಮ ಕನಕಪುರ ವಲಯದ ವ್ಯಾಪ್ತಿಗೆ ಬರುತ್ತವೆ.

ಆರೋಪಿತರು ಪರವಾನಗಿ ಪಡೆದು ಗಣಿಗಾರಿಕೆಯನ್ನು ಮಾಡುತ್ತಿದ್ದರ ಎಂದರೆ ನನಗೆ ಆ ಬಗ್ಗೆ ಮಾಹಿತಿ ಇಲ್ಲ. ಈ ಪ್ರಕರಣ ದಾಖಲಾಗುವರೆಗೆ ಆರೋಪಿತರು ಕಲ್ಲನ್ನು ಸಾಗಿಸುತ್ತಿರುವ ಬಗ್ಗೆ ಮತ್ತು ಗಣಿಗಾರಿಕೆ ಮಾಡುತ್ತಿರುವ ಬಗ್ಗೆ ಯಾವುದಾದರೂ ಪ್ರಕರಣ ದಾಖಲಾಗಿದಿಯಾ ಎಂದರೆ ನನಗೆ ಆ ಬಗ್ಗೆ ಮಾಹಿತಿ ಇಲ್ಲ. ಈ ಪ್ರಕರಣ ದಾಖಲಾಗುವವರೆಗೂ ಆರೋಪಿತರ ಪರಿಚಯ ನನಗೆ ಇರಲಿಲ್ಲ.

ದಿ.**03.03.2012** ರಂದು ನಾನು ಗಸ್ತು ಕರ್ತವ್ಯದಲ್ಲಿದ್ದೇನು. ಠಾಣಾ ದಿನಚರಿಯಲ್ಲಿ ಗಸ್ತಿಗೆ ಹೋಗುವ ಸಮಯ, ಅಲ್ಲಿಂದ ಬಂದ ಸಮಯ ಮತ್ತು ಗಸ್ತಿನ ವೇಳೆಗೆ ಆದ ಘಟನೆಯ ವಿವರಗಳನ್ನು ನಮೂದಿಸಬೇಕು ಎಂದರೆ ಸರಿ. ಆರೋಪಿತರ ಕೃತ್ಯದ ಬಗ್ಗೆ ದಿ.**03.03.2012** ರ ಠಾಣಾ ದಿನಚರಿಯಲ್ಲಿ ನಮೂದಿಸಿರುತ್ತೇನೆ. ಆ ದಿನಚರಿಯನ್ನು ಪೊಲೀಸರಿಗೆ ನಾನು ನೀಡಿಲ್ಲ.

ಘಟನೆಯಾದ ವೇಳೆಗೆ ನಾವೆಲ್ಲರು ಸಮವಸ್ತ್ರದಲ್ಲಿದ್ದೇವು. ಆರೋಪಿತರು ಒಡೆದುಹಾಕಿದ ಪೋನ್ ನನ್ನ ಸ್ವಂತ ಪೋನ್ ಆಗಿರುತ್ತದೆ. ಅದಕ್ಕೆ ಸುಮಾರು ರೂ.**4,000/-** ಬೆಲೆ ಇತ್ತು. ಆ ದೂರಿನಲ್ಲಿ ಮೊಬೈಲ್ ನ ಬೆಲೆ ಮತ್ತು ದೂರವಾಣಿ ಸಂಖ್ಯೆಯನ್ನು ಬರೆದಿಲ್ಲ. ದೂರಿನಲ್ಲಿ ಸದರಿ ಕ್ವಾಲಿಸ್ ವಾಹನದ ಸಂಖ್ಯೆಯನ್ನು ನಮೂದು ಮಾಡಿಲ್ಲ.

ಸದರಿ ಲಾರಿಯಲ್ಲಿ ಅಂದಾಜು ಎಷ್ಟು ತೂಕದ ಕಲ್ಲು ಇತ್ತು ಎಂದು ನಾನು ನಮೂದು ಮಾಡಿಲ್ಲ. ಆ ಲಾರಿಯ ಚಾಲಕ ಅದನ್ನು ಚಲಾಯಿಸುತ್ತಿದ್ದು, ಅದನ್ನು ನಾವು ತಡೆದಾಗ ಆತ ನಿಲ್ಲಿಸಿರುತ್ತಾನೆ. ಆ ಚಾಲಕನನ್ನು ನಾವು ವಶಕ್ಕೆ ಪಡೆದಿಲ್ಲ. ಆತನ ಹೆಸರು ಮತ್ತು ವಿಳಾಸವನ್ನು ತಿಳಿದು ದೂರಿನಲ್ಲಿ ನಮೂದಿಸಿಲ್ಲ.

ಸದರಿ ಲಾರಿಯು ಯಾವ ಕಲ್ಲಿನ ಕ್ವಾರೆಯಿಂದ ಕಲ್ಲನ್ನು ತುಂಬಿಕೊಂಡು ಬಂದಿತ್ತು ಎಂದು ನಾನು ದೂರನ್ನು ಕೊಡುವ ಪೂರ್ವದಲ್ಲಿ ಹೋಗಿ ಪರಿಶೀಲನೆ ಮಾಡಿಲ್ಲ. ಯಾವ ಕಲ್ಲಿನ ಕ್ವಾರೆಯಿಂದ ಆ ಲಾರಿಯು ಕಲ್ಲನ್ನು ತುಂಬಿಕೊಂಡು ಬಂದಿತ್ತು ಎಂದು ಆ ಸ್ಥಳಕ್ಕೆ ಹೋಗಿ ನಾವು ಪಂಚನಾಮವನ್ನು ಜರುಗಿಸಿಲ್ಲ.

ನಾನು ಮತ್ತು ನನ್ನೊಂದಿಗೆ ಗಸ್ತಿನಲ್ಲಿದ್ದ ಪ್ರಾಸಾ-**2** ರಿಂದ **4** ರವರ ಮೊಬೈಲ್ ಪೋನ್ ಗಳು ಪ್ರಕರಣ ದಾಖಲಿಸುವವರೆಗೂ ಚಾಲ್ತಿಯಲ್ಲಿದ್ದವಾ ಎಂದರೆ ಘಟನೆ ನಡೆಯುವರೆಗೂ ಚಾಲ್ತಿಯಲ್ಲಿದ್ದವು.

ಬೇಕುಪ್ಪೆ ವೃತ್ತದಿಂದ ಕನಕಪುರ ಗ್ರಾಮಾಂತರ ಪೊಲೀಸ್ ಠಾಣೆ ಮತ್ತು ಕನಕಪುರ ಪುರ ಪೊಲೀಸ್ ಠಾಣೆ ಸುಮಾರು 5 ಕಿ.ಮಿ ಅಂತರದಲ್ಲಿವೆಂದರೆ ಸರಿ. ಆ ಬೇಕುಪ್ಪೆ ವೃತ್ತದಿಂದ ಧರ್ಮರಾಯ ದೇವಸ್ಥಾನಕ್ಕೆ ನಾವು ಬರಲು ಸುಮಾರು 5 ನಿಮಿಷ ಸಮಯ ತೆಗೆದುಕೊಂಡೆವು. ಆ 5 ನಿಮಿಷದ ಅವಧಿಯಲ್ಲಿ ನಮ್ಮ ವಲಯ ಕಚೇರಿಗೆ ದೂರವಾಣಿ ಮಾಡಿ ಆ ಲಾರಿಯನ್ನು ನಿಲ್ಲಿಸಿ ಎಂದು ತಿಳಿಸಿದೆವು. ಪೊಲೀಸ್ ಠಾಣೆಗೆ ಆ ರೀತಿ ತಿಳಿಸಿಲ್ಲ. ನಾನು ಕಚೇರಿಗೆ ತಿಳಿಸಿದ ಬಗ್ಗೆ ನನ್ನ ದೂರಿನಲ್ಲಿ ನಮೂದಿಸಿದ್ದೀನಾ ಎಂದರೆ ನನಗೆ ಮಾಹಿತಿ ಇಲ್ಲ.

ಸದರಿ ಲಾರಿಯ ಮತ್ತು ಕ್ವಾಲಿಸ್ ವಾಹನದ ಚಹರೆಯನ್ನು ದೂರಿನಲ್ಲಿ ನಮೂದಿಸಿದ್ದೀರಾ ಎಂದರೆ ಲಾರಿಯ ಸಂಖ್ಯೆಯನ್ನು ದೂರಿನಲ್ಲಿ ನಮೂದಿಸಿರುತ್ತೇನೆ. ಕ್ವಾಲಿಸ್ ವಾಹನದ ಸಂಖ್ಯೆಯನ್ನು ನಮೂದಿಸಿಲ್ಲ.

ಲಾರಿಯಲ್ಲಿ ಇದ್ದ ಕಲ್ಲು ಸಾಗಣಿಕೆಯ ಪರವಾನಗಿಯನ್ನು ನಾನು ಆರೋಪಿತರಿಂದ ಪಡೆದಿಲ್ಲ, ಅವರು ನನಗೆ ಅದನ್ನು ತೋರಿಸಿರುತ್ತಾರೆ. ಆ ಪರವಾನಗಿಯ ಅವಧಿ, ಅದು ಯಾವ ಪ್ರದೇಶದ ಗಣಿಗಾರಿಕೆಗೆ ಮತ್ತು ಕಲ್ಲನ್ನು ಎಲ್ಲಿಂದ ಎಲ್ಲಿಗೆ ಸಾಗಿಸಲು ಆ ಪರವಾನಗಿ ಇದೆ ಹಾಗೂ ಅದು ಯಾರ ಹೆಸರಿಲ್ಲಿದೆ ಎಂಬುದನ್ನು ನಾನು ನೋಡಿರುತ್ತೇನೆ. ಆ ವಿವರಗಳನ್ನು ನನ್ನ ದೂರಿನಲ್ಲಿ ನಮೂದಿಸಿಲ್ಲ.

ಧರ್ಮರಾಯ ದೇವಾಸ್ಥಾನದ ಸುತ್ತಮುತ್ತ ಮನೆಗಳು ಮತ್ತು ಅಂಗಡಿಗಳು ಇವೆ ಎಂದರೆ ಸರಿ. ಜೋರಾಗಿ ಕೂಗಾಡಿದರೆ ಆ ಮನೆಯಲ್ಲಿದ್ದವರಿಗೆ ಕೇಳಿಸುತ್ತದೆ ಎಂದರೆ ಸರಿ.

ನನ್ನ ದೂರಿನಲ್ಲಿ ನಮೂದಿಸಿರುವ ರೂ.**4,200/-** ಹಣದ ಮುಖಬೆಲೆಯ ನೋಟುಗಳನ್ನು ನಮೂದಿಸಿಲ್ಲ. ಆ ಮುಖಬೆಲೆಯ ನೋಟುಗಳಲ್ಲಿ ಇದ್ದ ಕ್ರಮಸಂಖ್ಯೆಯನ್ನು ದೂರಿನಲ್ಲಿ ನಮೂದಿಸಿಲ್ಲ. ಆ ಹಣವನ್ನು ಪೊಲೀಸರಿಗೆ ನಾನೇ ಹಸ್ತಾಂತರಿಸಿರುತ್ತೇನೆ. ಪ್ರಕರಣ ದಾಖಲಾಗುವ ವರೆಗೂ ಆ ಹಣ ನನ್ನ ಬಳಿಯೆ ಇತ್ತು. ಆ ಹಣ ನನ್ನ ಬಳಿ ಇದ್ದರು ಕೂಡಾ ನಾನು ಆ ಹಣದ ಮುಖಬೆಲೆಯ ನೋಟುಗಳು ಮತ್ತು ಆ ನೋಟುಗಳ ಕ್ರಮಸಂಖ್ಯೆಯನ್ನು ನನ್ನ ದೂರಿನಲ್ಲಿ ಏಕೆ ನಮೂದಿಸಿಲ್ಲ ಎಂದರೆ ನನಗೆ ಸಮಯದ ಅಭಾವವಿದ್ದು ಮತ್ತು ನಮ್ಮ ಸಿಬ್ಬಂದಿಗಳು ಹಲ್ಲೆಗೆ ಒಳಗಾಗಿದ್ದು, ಅವರಿಗೆ ಚಿಕಿತ್ಸೆ ಕೋಡಿಸುವ ತರಾತುರಿಯಲ್ಲಿದ್ದುದ್ದರಿಂದ ಅದನ್ನು ನಮೂದಿಸಿಲ್ಲ. ಆ ವಿಷಯವನ್ನು ನನ್ನ ದೂರಿನಲ್ಲಿ ನಮೂದಿಸಿಲ್ಲ.

ನಾನು ಪೂರ್ವ ದಿಕ್ಕಿನಲ್ಲಿ ನಿಂತಿದ್ದು, ಪಶ್ಚಿಮದ ದಿಕ್ಕಿನಲ್ಲಿ ನಿಂತಿದ್ದ **1** ನೇ ಆರೋಪಿತ ಹಣ ಮತ್ತು ಮೊಬೈಲನ್ನು ಎಸೆದಿರುತ್ತಾನೆ. ಆ ವಿಷಯವನ್ನು ನನ್ನ ದೂರಿನಲ್ಲಿ ನಮೂದಿಸಿಲ್ಲ.

ಪ್ರಾಸಾ-**3** ರವರ ಬಟ್ಟೆ ಕೀಳಲ್ಪಟ್ಟಿದ್ದು ಮತ್ತು ರಕ್ತಕಲೆಯಾಗಿತ್ತು. ಆ ಬಟ್ಟೆಯನ್ನು ಪೊಲೀಸರಿಗೆ ನೀಡಿಲ್ಲ. ಸಾಕ್ಷಿಯು ಮುಂದುವರೆದು ಅದು ಸಮವಸ್ತ್ರವಾಗಿದ್ದ ಕಾರಣ ಅದನ್ನು ನೀಡಿಲ್ಲ ಎಂದು ನುಡಿದಿದ್ದಾರೆ. ಆ ವಿಷಯವನ್ನು ದೂರಿನಲ್ಲಿ ನಮೂದಿಸಿಲ್ಲ.

ನಾವು ಪೊಲೀಸ್ ಠಾಣೆಗೆ ದೂರನ್ನು ಕೊಡಲು ಹೋದಾಗ ಸಮವಸ್ತ್ರದಲ್ಲಿ ಹೋಗಿದ್ದು ಅದನ್ನು ಪೊಲೀಸರು ನೋಡಿರುತ್ತಾರೆಂದರೆ ಸರಿ. ಪೊಲೀಸರು ಪಂಚನಾಮ ಜರುಗಿಸಿ ರಕ್ತದ ಕಲೆಯಾಗಿದ್ದ ಬಟ್ಟೆಯನ್ನು ಜಪ್ತು ಪಡಿಸಿಲ್ಲ.

ಕ್ವಾಲಿಸ್ ವಾಹನದಲ್ಲಿ ಬಂದಿದ್ದವರ ಹೆಸರು ನನಗೆ ಗೊತ್ತಿಲ್ಲ.

ಪೊಲೀಸ್ ಠಾಣೆಯಿಂದ ಆಸ್ಪತ್ರೆಗೆ ಚಿಕಿತ್ಸೆ ಪಡೆಯಲು ಹೋದಾಗ ಆ ಬಗ್ಗೆ ಪೊಲೀಸರಿಂದ ಮೇಮೊವನ್ನು ಪಡೆದಿಲ್ಲ.

ಸದರಿ ಲಾರಿಯ ರಹದಾರಿ ಮತ್ತು ಗಣಿಗಾರಿಕೆಯ ರಹದಾರಿಯನ್ನು ಸಂಬಂಧಪಟ್ಟ ಇಲಾಖೆಯಿಂದ ಪಡೆದು ನಾನು ಪೊಲೀಸರಿಗೆ ನೀಡಿಲ್ಲ.

ದಿನಾಂಕ **03.03.2012** ರಂದು ಬೆಳಿಗ್ಗೆ **10:30** ಗಂಟೆ ಸಮಯದಲ್ಲಿ ಪಂಚನಾಮವನ್ನು ಜರುಗಿಸಲಾಯಿತು. ಪಂಚನಾಮ ಸ್ಥಳದ ಪೂರ್ವಕ್ಕೆ ರೇಷ್ಮೆಗೂಡಿನ ಮಾರುಕಟ್ಟೆ, ಪಶ್ಚಿಮಕ್ಕೆ ಸುಮುಖ ಮೋಟಾರ್ಸ್ ನ ಅಂಗಡಿ, ಉತ್ತರ-ದಕ್ಷಿಣಕ್ಕೆ ರಸ್ತೆ ಇವೆ. ಆ ಸ್ಥಳವು ಜನಸಂದಣಿ ಪ್ರದೇಶ ಎಂದರೆ ಸರಿ. ಪಂಚನಾಮಕ್ಕೆ ಸಾರ್ವಜನಿಕರು ಸಹಿ ಮಾಡಿಲ್ಲ ಎಂದರೆ ಸರಿ. ಅದಕ್ಕೆ ನಮ್ಮ ಇಲಾಖೆಯವರು ಸಹಿ ಮಾಡಿರುತ್ತಾರೆ. ಪಂಚನಾಮವನ್ನು ಪೊಲೀಸರು ಜರುಗಿಸಿದ್ದು, ಅವರ ಹೆಸರು ನನಗೆ ಗೊತ್ತಿಲ್ಲ. ಪಂಚನಾಮದ ವಿವರಗಳನ್ನು ನನಗೆ ಓದಿ ಹೇಳಿರುತ್ತಾರೆ. ಪಂಚನಾಮ ಸ್ಥಳದ ರಸ್ತೆಯ ಉತ್ತರ-ದಕ್ಷಿಣ ಅಳತೆಯು **6** ಅಡಿ ಇತ್ತು. ಪಂಚನಾಮ ಸ್ಥಳದಿಂದ ಸದರಿ ಧರ್ಮರಾಯ ದೇವಸ್ಥಾನ **150** ಅಡಿ ಅಂತರವಿತ್ತು. ಪಂಚನಾಮಕ್ಕೆ ಹೋಗುವ ವರೆಗೂ ಸದರಿ ಮೊಬೈಲ ಅವಶೇಷ ರಸ್ತೆಯ ಪಕ್ಕ ಬಿದ್ದಿದ್ದವು. ಆ ಪಂಚನಾಮದ ಸ್ಥಳದ ರಸ್ತೆಯಲ್ಲಿ ನಿರಂತರವಾಗಿ ವಾಹನಗಳು ಓಡಾಡುತ್ತವೆಂದರೆ ಸರಿ. ಸದರಿ ಸ್ಥಳದಲ್ಲಿ ಮೊಬೈಲ್ ಅವಶೇಷಗಳು ಇರಲಿಲ್ಲ ಎಂದರೆ

ಸರಿಯಲ್ಲ. ನಾನೇ ಪೊಲೀಸ್ ಠಾಣೆಗೆ ಹೋಗಿ ಅವುಗಳನ್ನು ನೀಡಿದ್ದೇನೆಂದರೆ ಸರಿಯಲ್ಲ. ಪಂಚನಾಮಕ್ಕೆ ನಾನು ಮತ್ತು ನನ್ನ ಸಿಬ್ಬಂದಿಗಳು ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿದ್ದು, ಪಂಚನಾಮದ ಸ್ಥಳಕ್ಕೆ ಹೋಗಿಲ್ಲ ಎಂದರೆ ಸರಿಯಲ್ಲ.

1 ನೇ ಆರೋಪಿತನ ಹೆಸರನ್ನು ಹೊರತುಪಡಿಸಿ, ಉಳಿದ ಆರೋಪಿತರ ಹೆಸರುಗಳು ನನಗೆ ಗೊತ್ತಿಲ್ಲ. 1 ನೇ ಆರೋಪಿತನ ತಂದೆ ಮಾರೇಗೌಡ ಮೊದಲಿನಿಂದಲ್ಲೂ ಗ್ರಾನೈಟ್ ವ್ಯವಹಾರವನ್ನು ಮಾಡುತ್ತಿದ್ದಾರೆಂದರೆ ನನಗೆ ಗೊತ್ತಿಲ್ಲ.

ದಿ.03.03.2012 ರಂದು ನಾವು ಯಾವುದೇ ಲಾರಿಯನ್ನು ಅಡ್ಡಗಟ್ಟಿಲ್ಲ ಎಂದರೆ ಸರಿಯಲ್ಲ. ಆರೋಪಿತರು ಯಾವುದೇ ಕೃತ್ಯವನ್ನು ಮಾಡಿಲ್ಲ ಎಂದರೆ ಸರಿಯಲ್ಲ. 1 ನೇ ಆರೋಪಿತ ಯಾವುದೇ ಹಣವನ್ನು ಎಸೆದಿಲ್ಲ ಎಂದರೆ ಸರಿಯಲ್ಲ. ಆರೋಪಿತರು ನಮ್ಮ ಕರ್ತವ್ಯಕ್ಕೆ ಅಡ್ಡಿಪಡಿಸಿಲ್ಲ ಎಂದರೆ ಸರಿಯಲ್ಲ.

1 ನೇ ಆರೋಪಿತನ ತಂದೆ ಒಂದು ಪಕ್ಷದ ಮುಖಂಡರಾಗಿದ್ದು, ಬೇರೊಂದು ಪಕ್ಷದ ಮುಖಂಡರ ಮಾತಿನ ಮೇರೆಗೆ ಯಾವುದೇ ಘಟನೆ ಜರುಗದಿದ್ದರೂ ಸುಳ್ಳು ದೂರನ್ನು ಆರೋಪಿತರ ವಿರುದ್ದ ನೀಡಿದ್ದೇನೆಂದರೆ ಸರಿಯಲ್ಲ. ಈ ಪ್ರಕರಣಕ್ಕೂ ಮತ್ತು ಆರೋಪಿತರಿಗೂ ಯಾವುದೇ ಸಂಬಂಧವಿಲ್ಲದಿದ್ದರೂ ಸುಳ್ಳು ದೂರನ್ನು ನೀಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರುವಿಚಾರಣೆ ಃಇಲ್ಲ**

**(ಸಾಕ್ಷಿಯ ವಿಚಾರಣೆಯನ್ನು ನಾನು ತೆರೆದ ನ್ಯಾಯಾಲಯದಲ್ಲಿ ಪಡೆದುಕೊಂಡಿರುತ್ತೇನೆ ಎಂದು ದೃಡಿಕರೀಸುತ್ತೇನೆ.)**

**ಪ್ರಧಾನ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆಎಂಎಫ್‌ಸಿ ಕನಕಪುರ.**

**ಓ ಹೇ ಕೇ ಸ ಇ**

**ದಿಃ20.11.2019ರಂದು ಸಾಕ್ಷಿಗೆ ಪ್ರಮಾಣ ವಚನ ಬೋದಿಸಲಾಯಿತು.**

**ಮುಂದುವರೆದ ಮುಖ್ಯವಿಚಾರಣೆ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದಃ-**

1 ನೇ ಆರೋಪಿತ ನನಗೆ ಗುದ್ದಿದ್ದರಿಂದ ನನ್ನ ಎಡಗೆನ್ನೆ ಮತ್ತು ಕುತ್ತಿಗೆಯ ಮೇಲೆ ಪೆಟ್ಟಾಗಿರುತ್ತದೆ. ನಂತರ ನಾನು ಕನಕಪುರದ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುತ್ತೇನೆ.

1 ನೇ ಆರೋಪಿತ ರೂ.4,200/- ಹಣವನ್ನು ನಮ್ಮ ಜೀಪಿನ ಆಸನದ ಮೇಲೆ ಎಸೆದು, ತಮಗೆ ತೊಂದರೆ ಕೊಡದೆ ಲಾರಿಯನ್ನು ಬಿಡಬೇಕು ಎಂದು ಹೇಳಿರುತ್ತಾನೆ.

ಸದರಿ ಹಣ ಮತ್ತು ಮೊಬೈಲ್ ಅವಶೇಷಗಳನ್ನು ನೋಡಿದರೆ ಗುರುತಿಸುತ್ತೇನೆ. ಸದರಿ ಹಣದಲ್ಲಿ ರೂ.500/- ಮುಖಬೆಲೆಯ 8 ನೋಟುಗಳ ಕಲರ್ ಜೆರಾಕ್ಸ್ ಗಳನ್ನು ಮತ್ತು ರೂ. 100 ಮುಖಬೆಲೆಯ 2 ನೋಟುಗಳನ್ನು ಹಾಗೂ ಮೊಬೈಲ್ ಅವಶೇಷಗಳನ್ನು ಸಾಕ್ಷಿಗೆ ತೋರಿಸಲಾಗಿ ಸಾಕ್ಷಿಯು ಅವುಗಳನ್ನು ಗುರುತಿಸಿರುತ್ತಾರೆ. ಅವುಗಳು ಈಗಾಗಲೇ ಎಂಒ-1 ಮತ್ತು ಎಂಒ-2 ಎಂದು ಗುರುತಿಸಲ್ಪಟ್ಟಿವೆ.

ಆರೋಪಿತರು ಬಳಸಿದ ಲಾರಿ ಮತ್ತು ಕ್ವಾಲಿಸ್ ವಾಹನವನ್ನು ನೋಡಿದರೆ ಗುರುತಿಸುತ್ತೇನೆ. ಸದರಿ ಲಾರಿಯ 4 ಭಾವಚಿತ್ರಗಳನ್ನು ಈಗಾಗಲೇ ನಿಪಿ-4 ರಿಂದ 7 ಎಂದು ಗುರುತಿಸಲ್ಪಟ್ಟಿದ್ದು, ಸದರಿ ಕ್ವಾಲಿಸ್ ವಾಹನದ ಮೂರು ಭಾವಚಿತ್ರಗಳನ್ನು ಈಗಾಗಲೇ ನಿಪಿ-8 ರಿಂದ 10 ಎಂದು ಗುರುತಿಸಲ್ಪಟ್ಟಿವೆ.

ಪೊಲೀಸರಿಗೆ ಘಟನೆಯ ಕುರಿತು ಹೇಳಿಕೆ ನೀಡಿರುತ್ತೇನೆ.

ನನ್ನ ಜೊತೆ ಪ್ರಾಸಾ-1 ರವರು ಚಿಕಿತ್ಸೆ ಪಡೆದಿರುತ್ತಾರೆ.

**ಈ ಹಂತದಲ್ಲಿ ಸಾಕ್ಷಿಯು ಅಭಿಯೋಜನೆಯ ಪ್ರಕರಣಕ್ಕೆ ವಿರುದ್ದವಾಗಿ ಭಾಗಶಃ ಸಾಕ್ಷ್ಯ ನುಡಿದಿರುವುದರಿಂದ ಅವರನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲನ್ನು ಮಾಡಲು ಮಾನ್ಯ ಎಪಿಪಿ ರವರು ಅನುಮತಿಯನ್ನು ಕೋರಿದ್ದು, ಅನುಮತಿಯನ್ನು ನೀಡಲಾಯಿತು.**

**ಪಾಟೀ ಸವಾಲು ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದಃ-**

**2** ರಿಂದ **6** ನೇ ಆರೋಪಿತರನ್ನು ನಾನು ಘಟನೆಯ ದಿನ ನೋಡಿದ್ದು, ಈ ದಿನ ನ್ಯಾಯಾಲಯದ ಮುಂದಿರುತ್ತಾರೆಂದರೆ ಸರಿಯಲ್ಲ.

**ಪಾಟೀ ಸವಾಲು ಶ್ರೀ ಎಸ್.ಡಿ ಆರೋಪಿ ಪರ ವಕೀಲರಿಂದಃ-**

ದಿ.**02.03.2012** ರಂದು ನನ್ನ ಮನೆಯನ್ನು ಬಿಟ್ಟಾಗ ರಾತ್ರಿ **8:30** ಗಂಟೆಯಾಗಿರುತ್ತದೆ. ನಂತರ ನನ್ನ ಕಚೇರಿಗೆ ಬಂದಿರುತ್ತೇನೆ. ಬೇಕುಪ್ಪೆ ವೃತ್ತಕ್ಕೆ ಬಂದಾಗ ರಾತ್ರಿ **9:30** ಗಂಟೆಯಾಗಿತ್ತು. ನಾವು ಎಲ್ಲರೂ ಸಮವಸ್ತ್ರದಲ್ಲಿದ್ದೇವು. ಸುಮಾರು ಮುಕ್ಕಾಲು ಗಂಟೆ ಬೇಕುಪ್ಪೆ ವೃತ್ತದಲ್ಲಿದ್ದೇವು. ಆ ವೇಳೆಗೆ ಬಸ್ಸು ಮತ್ತು ಕಾರು ಆ ರಸ್ತೆಯಲ್ಲಿ ಹೋದವು. ಲಾರಿಗಳು ಹೋಗಿಲ್ಲ. ಈ ಪ್ರಕರಣ ದಾಖಲಾಗುವವರೆಗೂ ಆ ರಸ್ತೆಯಲ್ಲಿ ಯಾವುದೇ ಲಾರಿ ಹೋಗಿಲ್ಲ. ಈ ಪ್ರಕರಣ ದಾಖಲಾಗುವರೆಗೂ ಆ ರಸ್ತೆಯಲ್ಲಿ ಯಾವುದೇ ಕಲ್ಲಿನ ಲಾರಿ ಬಂದಿಲ್ಲ ಮತ್ತು ನಾನು ಹಾಗೂ ಪ್ರಾಸಾ-**1** ರವರು ತಪಾಸಣೆ ಮಾಡಿಲ್ಲ.

ನಾನು ಪೊಲೀಸರಿಗೆ ನೀಡಿದ ಹೇಳಿಕೆಯಲ್ಲಿ ನಮ್ಮ ಜೀಪಿನ ಸಂಖ್ಯೆಯನ್ನು ಹೇಳಿರುತ್ತೇನೆ. ಲಾರಿ ಮತ್ತು ಕ್ವಾಲಿಸ್ ವಾಹನದ ಸಂಖ್ಯೆಯನ್ನು ಹೇಳಿಲ್ಲ. ಆ ಲಾರಿ

ಮತ್ತು ಕ್ವಾಲಿಸ್ ವಾಹನದ ಚಹರೆಗಳನ್ನು ನನಗೆ ಹೇಳಲು ಬರುವುದಿಲ್ಲ. ಆ ಲಾರಿ ಮತ್ತು ಕ್ವಾಲಿಸ್ ವಾಹನದ ಚಾಲಕರು ನನಗೆ ಪರಿಚಯವಿಲ್ಲ.

ಈ ಪ್ರಕರಣ ದಾಖಲಾಗುವ ವರೆಗೂ ನನಗೆ ಮತ್ತು ಪ್ರಾಸಾ-1 ರವರಿಗೆ ಆರೋಪಿತರ ಪರಿಚಯವಿರಲಿಲ್ಲ. ಆರೋಪಿತರನ್ನು ಈ ದಿನ ಮಾತ್ರ ನೋಡುತ್ತಿದ್ದೇನೆಂದರೆ ಈ ದಿನ ಮತ್ತು ಹಿಂದಿನ ವಿಚಾರಣೆಯಲ್ಲಿ ನೋಡಿರುತ್ತೇನೆ.

ನನ್ನ ಮೇಲಾಧಿಕಾರಿಗಳಿಗೆ ಜೀಪನ್ನು ಚಾಲನೆ ಮಾಡುವ ಕರ್ತವ್ಯವನ್ನು ಮಾತ್ರ ನಾನು ಹೊಂದಿದ್ದು, ಬೇರೆ ಕರ್ತವ್ಯ ಹೊಂದಿಲ್ಲ ಎಂದರೆ ಸರಿ. ಘಟನೆಯ ದಿನ ಪ್ರಾಸಾ-1 ರವರು ಯಾವ ಪರವಾನಗಿಯನ್ನು ನೋಡಿದರು ಮತ್ತು ಯಾವ ಲಾರಿಗಳನ್ನು ಅಡ್ಡಗಟ್ಟಿದ್ದರು ಎಂದು ಅವರಿಗೆ ಮಾತ್ರ ಗೊತ್ತಿದ್ದು, ನನಗೆ ಗೊತ್ತಿಲ್ಲ ಎಂದರೆ ಸರಿ. ಈ ಪ್ರಕರಣದ ಕುರಿತು ನಾನು ನೀಡಿರುವ ಹೇಳಿಕೆಯ ಬಗ್ಗೆ ಪ್ರಾಸಾ-1 ರವರಿಗೆ ಮಾತ್ರ ಗೊತ್ತಿದ್ದು, ನನಗೆ ಗೊತ್ತಿಲ್ಲ ಎಂದರೆ ಸರಿ.

ನಮ್ಮಲ್ಲಿ ಯಾರಿಗೂ ಬಟ್ಟೆ ಕೀಳಲ್ಪಟ್ಟಿರಲಿಲ್ಲ ಮತ್ತು ಬಟ್ಟೆಗೆ ರಕ್ತದ ಕಲೆಯಾಗಿರಲಿಲ್ಲ. ಲಾರಿಯ ಸಂಖ್ಯೆ ಮತ್ತು ಯಾವ ಲಾರಿ ಎಂದು ಪ್ರಾಸಾ-1 ರವರು ತಪಾಸಣೆ ಮಾಡಿದರು ಎಂಬ ಬಗ್ಗೆ ನನಗೆ ಗೊತ್ತಿರದೆ ಪ್ರಾಸಾ-1 ರವರಿಗೆ ಮಾತ್ರ ಗೊತ್ತಿದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಲಾರಿಯ ಸಂಖ್ಯೆಯನ್ನು ತಾನು ನಮೂದಿಸಿದ್ದೇನೆಂದು ನುಡಿದಿದ್ದಾರೆ.

ಬೇಕುಪ್ಪೆ ವೃತ್ತದಿಂದ ಧರ್ಮರಾಯ ದೇವಸ್ಥಾನಕ್ಕೆ ಬರುವ ವರೆಗೆ ಸುಮಾರು ಒಂದು ಗಂಟೆ ಸಮಯವನ್ನು ತೆಗೆದುಕೊಂಡಿರುತ್ತೇವೆ.

ದೂರನ್ನು ಪೊಲೀಸರಿಗೆ ನೀಡುವ ವರೆಗೂ ಪ್ರಾಸಾ-1 ಮತ್ತು ನನ್ನ ಮೊಬೈಲ್ ಚೆನ್ನಾಗಿದ್ದವು ಎಂದರೆ ನನ್ನ ಬಳಿ ಮೊಬೈಲ್ ಇರಲಿಲ್ಲ, ಪ್ರಾಸಾ-1 ರವರ ಬಳಿ ಇತ್ತು. ಧರ್ಮರಾಯ ದೇವಸ್ಥಾನದ ಹತ್ತಿರ ಬಹಳಷ್ಟು ಜನರು ಇದ್ದರು. ಅವರ ಹೆಸರು ಮತ್ತು ಪರಿಚಯ ನನಗೆ ಗೊತ್ತಿಲ್ಲ.

ಗುಂಪಿನಲ್ಲಿದ್ದ ಜನರು ಮತ್ತು ಪ್ರಾಸಾ-1 ರವರ ನಡುವೆ ಏನು ಆಯಿತು ಎಂದು ಪ್ರಾಸಾ-1 ರವರಿಗೆ ಗೊತ್ತಿದ್ದು, ನನಗೆ ಗೊತ್ತಿಲ್ಲ. ಸ್ಥಳದಲ್ಲಿ ಆಗಿದೆ ಎಂದು ಪ್ರಾಸಾ-1 ರವರು ಹೇಳಿರುವ ಘಟನೆಯ ಬಗ್ಗೆ ಅವರಿಗೆ ಮಾತ್ರ ಮಾಹಿತಿ ಇದ್ದು, ನನಗೆ ಗೊತ್ತಿಲ್ಲ ಎಂದರೆ ಸರಿ.

ನಾವು ಆಸ್ಪತ್ರೆಗೆ ಹೋಗುವಾಗ ಪೊಲೀಸರು ಮೆಮೋ ನೀಡಿಲ್ಲ. ನಾವೇ ಹೋಗಿರುತ್ತೇವೆ. ಪ್ರಾಸಾ-1 ರವರು ಆಸ್ಪತ್ರೆಗೆ ಹೋಗಿ ಚಿಕಿತ್ಸೆಯನ್ನು ಪಡೆದು ನಂತರ ದೂರನ್ನು ನೀಡಿರುತ್ತಾರೆಂದರೆ ಸರಿ. ಆ ಗುಂಪಿನ ಜನರಲ್ಲಿ ಯಾರು ಏನು ಮಾಡಿದರು ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ನನ್ನ ಮತ್ತು ಪ್ರಾಸಾ-1 ರವರ ಬಟ್ಟೆಯನ್ನು ಪೊಲೀಸರು ಜಪ್ತು ಪಡಿಸಿಲ್ಲ.

ಪ್ರಾಸಾ-1 ರವರು ದೂರನ್ನು ನೀಡಿದ ದಿನವೆ ನಾನು ಹೇಳಿಕೆಯನ್ನು ಪೊಲೀಸರಿಗೆ ನೀಡಿರುತ್ತೇನೆ. ನಂತರ ಪೊಲೀಸ್ ಠಾಣೆಗೆ ಹೋಗಿ ಹೇಳಿಕೆ ನೀಡಿಲ್ಲ.

ಸದರಿ ಕಲ್ಲು ಮತ್ತು ಲಾರಿ ಯಾರಿಗೆ ಸೇರಿದ್ದು ಎಂದು ನನಗೆ ಗೊತ್ತಿಲ್ಲ. ಆ ಹಣದಲ್ಲಿ ರೂ.500 ಮುಖಬೆಲೆಯ 8 ನೋಟುಗಳು ಇದ್ದವು. ಅವುಗಳನ್ನು ಪ್ರಾಸಾ-1 ರವರು ತೆಗೆದುಕೊಂಡು ಪೊಲೀಸ್ ಠಾಣೆಗೆ ನೀಡಿರುತ್ತಾರೆ. ಆ ಮೊಬೈಲ್ ಯಾವ

ಕಂಪನಿಯಾದು ಎಂದು ನನಗೆ ಗೊತ್ತಿಲ್ಲ. ದೂರನ್ನು ನೀಡುವ ವರೆಗೂ ಆ ಹಣ ಪ್ರಾಸಾ-1 ರವರ ಬಳಿಯೆ ಇತ್ತು.

ನಾನು ಜೀಪ್ ಚಾಲಕನಾಗಿ ಘಟನಾ ಸ್ಥಳಕ್ಕೆ ಹೋಗಿಲ್ಲ, ಯಾವುದೇ ಕೃತ್ಯ ಜರುಗಿಸಿಲ್ಲ, ಆರೋಪಿತರು ಯಾವುದೇ ಕೃತ್ಯವನ್ನು ಮಾಡಿಲ್ಲ, 1 ನೇ ಆರೋಪಿತ ಯಾವುದೇ ಹಣವನ್ನು ಎಸೆದಿಲ್ಲ, ಆರೋಪಿತರು ನಮ್ಮ ಕರ್ತವ್ಯಕ್ಕೆ ಅಡ್ಡಿಪಡಿಸಿಲ್ಲ ಎಂದರೆ ಸರಿಯಲ್ಲ.

ನಮ್ಮ ಕಚೇರಿಯಿಂದ ಹೊರಟ ನಂತರ ದೂರು ಕೊಡುವ ವರೆಗೂ ನಮ್ಮ ಇಲಾಖಾ ಜೀಪಿನಲ್ಲಿ ಓಡಾಡಿರುತ್ತೇವೆ. ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಈ ಪ್ರಕರಣ ಮತ್ತು ಆರೋಪಿತರಿಗೂ ಯಾವುದೇ ಸಂಬಂಧ ಇಲ್ಲದಿದ್ದರೂ ಮೇಲಾಧಿಕಾರಿಗಳ ಮಾತಿನ ಮೇರೆಗೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರುವಿಚಾರಣೆ ಃಇಲ್ಲ**

**(ಸಾಕ್ಷಿಯ ವಿಚಾರಣೆಯನ್ನು ನಾನು ತೆರೆದ ನ್ಯಾಯಾಲಯದಲ್ಲಿ ಪಡೆದುಕೊಂಡಿರುತ್ತೇನೆ ಎಂದು ದೃಡಿಕರೀಸುತ್ತೇನೆ.)**

**ಪ್ರಧಾನ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆಎಂಎಫ್‌ಸಿ ಕನಕಪುರ.**

**ಓ ಹೇ ಕೇ ಸ ಇ**

**ದಿ:20.11.2019ರಂದು ಸಾಕ್ಷಿಗೆ ಪ್ರಮಾಣ ವಚನ ಬೋದಿಸಲಾಯಿತು.**

**ಮುಂದುವರೆದ ಮುಖ್ಯವಿಚಾರಣೆ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ:-**

1 ನೇ ಆರೋಪಿತ ನನ್ನ ಮುಖ ಮತ್ತು ಕುತ್ತಿಗೆಯ ಮೇಲೆ ಹಲ್ಲೆ ಮಾಡಿರುತ್ತಾನೆ. ನಂತರ ನಾನು ಕನಕಪುರದ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುತ್ತೇನೆ.

ಸದರಿ ಹಣ ಮತ್ತು ಮೊಬೈಲ್ ಅವಶೇಷಗಳನ್ನು ನೋಡಿದರೆ ಗುರುತಿಸುತ್ತೇನೆ. ಸದರಿ ಹಣದಲ್ಲಿ ರೂ.500/- ಮುಖಬೆಲೆಯ 8 ನೋಟುಗಳ ಕಲರ್ ಜೆರಾಕ್ಸ್ ಗಳನ್ನು ಮತ್ತು ರೂ. 100 ಮುಖಬೆಲೆಯ 2 ನೋಟುಗಳನ್ನು ಹಾಗೂ ಮೊಬೈಲ್ ಅವಶೇಷಗಳನ್ನು ಸಾಕ್ಷಿಗೆ ತೋರಿಸಲಾಗಿ ಸಾಕ್ಷಿಯು ಅವುಗಳನ್ನು ಗುರುತಿಸಿರುತ್ತಾರೆ. ಅವುಗಳು ಈಗಾಗಲೇ ಎಂಒ-1 ಮತ್ತು ಎಂಒ-2 ಎಂದು ಗುರುತಿಸಲ್ಪಟ್ಟಿವೆ.

ಆರೋಪಿತರು ಬಳಸಿದ ಲಾರಿ ಮತ್ತು ಕ್ವಾಲಿಸ್ ವಾಹನವನ್ನು ನೋಡಿದರೆ ಗುರುತಿಸುತ್ತೇನೆ. ಸದರಿ ಲಾರಿಯ 4 ಭಾವಚಿತ್ರಗಳನ್ನು ಈಗಾಗಲೇ ನಿಪಿ-4 ರಿಂದ 7 ಎಂದು ಗುರುತಿಸಲ್ಪಟ್ಟಿದ್ದು, ಸದರಿ ಕ್ವಾಲಿಸ್ ವಾಹನದ ಮೂರು ಭಾವಚಿತ್ರಗಳನ್ನು ಈಗಾಗಲೇ ನಿಪಿ-8 ರಿಂದ 10 ಎಂದು ಗುರುತಿಸಲ್ಪಟ್ಟಿವೆ.

ಪೊಲೀಸರಿಗೆ ಘಟನೆಯ ಕುರಿತು ಹೇಳಿಕೆ ನೀಡಿರುತ್ತೇನೆ.

**ಪಾಟೀ ಸವಾಲು ಶ್ರೀ ಎಸ್.ಡಿ ಆರೋಪಿ ಪರ ವಕೀಲರಿಂದ:-**

ದಿ.2.03.2012 ರಂದು ನಾನು ಕರ್ತವ್ಯದಲ್ಲಿದ್ದೇನು. ಈ ಪ್ರಕರಣ ದಾಖಲಾಗುವ ವರೆಗೂ ಆರೋಪಿತರ ವಿರುದ್ದ ಯಾವುದೇ ಪ್ರಕರಣ ದಾಖಲಾಗಿರಲಿಲ್ಲ. ಈ ಪ್ರಕರಣ

ದಾಖಲಾಗುವರೆಗೂ ಆರೋಪಿತರ ಹೆಸರು ಮತ್ತು ವಿಳಾಸ ನನಗೆ ಗೊತ್ತಿರಲಿಲ್ಲ. ದಿ.02.03.2012 ರಂದು ಕೋಡಿಹಳ್ಳಿ ಶಾಖೆಯಲ್ಲಿದ್ದೆನು. ಘಟನೆಯ ಮಾಹಿತಿ ಬಂದನಂತರ ಕನಕಪುರದ ವಲಯ ಅರಣ್ಯಾಧಿಕಾರಿಯ ಕಚೇರಿಗೆ ಬಂದಿರುತ್ತೇನೆ. ದಿ.2.03.2012 ರಂದು ನಾನು ಮಾಡಿದ ಗಸ್ತಿನ ವಿವರವನ್ನು ಠಾಣಾ ದಿನಚರಿಯಲ್ಲಿ ನಮೂದಿಸಿದ್ದೇನೆ. ಆ ಗಸ್ತಿನಲ್ಲಿ ಯಾವುದಾದರೂ ಘಟನೆಗಳು ಕಂಡುಬಂದರೆ ಅದನ್ನು ಠಾಣಾ ದಿನಚರಿಯಲ್ಲಿ ನಮೂದಿಸಬೇಕು ಎಂದರೆ ಸರಿ. ಆ ದಿನಚರಿಯನ್ನು ಪೊಲೀಸರಿಗೆ ನನ್ನ ಹೇಳಿಕೆಯ ವೇಳೆಗೆ ನೀಡಿಲ್ಲ.

ನನ್ನ ಮೇಲಾಧಿಕಾರಿಗಳು ಒಂದು ಸ್ಥಳದಲ್ಲಿ ಅಕ್ರಮ ಗಣಿಗಾರಿಕೆ ನಡೆಯುತ್ತಿದೆ ಎಂದು ಮತ್ತು ಅಲ್ಲಿ ತಪಾಸಣೆ ಮಾಡಬೇಕು ಎಂದು ನನಗೆ ನಿರ್ದೇಶಿಸಿಲ್ಲ. ಈ ಪ್ರಕರಣ ದಾಖಲಾಗುವ ವರೆಗೂ ನಮ್ಮ ಶಾಖೆಯ ವ್ಯಾಪ್ತಿಯಲ್ಲಿ ಆರೋಪಿತರ ವಿರುದ್ದ ಅಕ್ರಮ ಗಣಿಗಾರಿಕೆ ಕಂಡುಬಂದಿಲ್ಲ. ಈ ಪ್ರಕರಣ ದಾಖಲಾಗುವ ವರೆಗೂ ಆರೋಪಿತರು ಬೇರೆ ಯಾವುದೇ ಪ್ರಕರಣದಲ್ಲಿ ಭಾಗಿಯಾಗಿರುವ ಬಗ್ಗೆ ನನ್ನ ಗಮನಕ್ಕೆ ಬಂದಿಲ್ಲ.

ಬೇಕುಪ್ಪೆ ವೃತ್ತದಲ್ಲಿ ಸುಮಾರು ಅರ್ಧ ಗಂಟೆ ಇದ್ದೆವು. ಈ ಪ್ರಕರಣ ದಾಖಲಾಗುವರೆಗೂ ಯಾವುದೇ ಲಾರಿ ಆ ವೃತ್ತದಲ್ಲಿ ಬಂದಿಲ್ಲ. ಬೇಕುಪ್ಪೆ ವೃತ್ತದಿಂದ ಧರ್ಮರಾಯ ದೇವಸ್ಥಾನಕ್ಕೆ ಬರಲು ನಾವು ಸುಮಾರು ಅರ್ಧ ಗಂಟೆ ಸಮಯ ತೆಗೆದುಕೊಂಡಿರುತ್ತೇವೆ. ಈ ಪ್ರಕರಣ ದಾಖಲಾಗುವರೆಗೂ ನನ್ನ, ಪ್ರಾಸಾ-1 ಮತ್ತು 2 ರವರ ಮೊಬೈಲ್ ಗಳು ಚೆನ್ನಾಗಿದ್ದವು.

ಬೇಕುಪ್ಪೆ ವೃತ್ತದಿಂದ ಸುಮಾರು 5 ಕಿ.ಮಿ ಅಂತರದಲ್ಲಿ ಕನಕಪುರ ಗ್ರಾಮಾಂತರ ಮತ್ತು ಕನಕಪುರ ಪುರ ಪೊಲೀಸ್ ಠಾಣೆ ಇವೆ ಎಂದರೆ ಸರಿ. ಸದರಿ ಲಾರಿಯನ್ನು ನಾವು ತಡೆದಿದ್ದರೂ ಕೂಡಾ ಅದನ್ನು ನಿಲ್ಲಿಸದ ಕಾರಣ ಅದನ್ನು ಹಿಡಿಯಿರಿ ಎಂದು ನಾವು ಪೊಲೀಸರಿಗೆ ದೂರವಾಣಿ ಕರೆ ಮಾಡಿ ತಿಳಿಸಿಲ್ಲ.

ಈ ಪ್ರಕರಣ ದಾಖಲಾಗುವವರೆಗೂ ನಾನು ಏರಂದಪ್ಪನಹಳ್ಳಿ ಮತ್ತು ಬಾಚೇಹಳ್ಳಿದೊಡ್ಡಿಯ ಕಲ್ಲಿನ ಕ್ವಾರೆಗೆ ಭೇಟಿ ಕೊಟ್ಟಿಲ್ಲ. ಆ ಲಾರಿಯ ಕಲ್ಲು ಯಾವ ಕ್ವಾರೆಗೆ ಸಂಬಂಧಿಸಿದ್ದು ಎಂದು ನಾನು ನೋಡಿಲ್ಲ. ಆ ಲಾರಿಯಲ್ಲಿದ್ದ ಕಲ್ಲು ಎಲ್ಲಿಂದ ಎಲ್ಲಿಗೆ ಹೋಗುತ್ತಿತ್ತು ಮತ್ತು ಅದನ್ನು ಸಾಗಿಸಲು ಯಾರ ಹೆಸರಿನಲ್ಲಿ ಪರವಾನಗಿ ಇತ್ತು ಎಂಬುದನ್ನು ನಾನು ಖುದ್ದಾಗಿ ನೋಡಿಲ್ಲ. ಆ ಪರವಾನಗಿಯನ್ನು ಭೂ ವಿಜ್ಞಾನ ಮತ್ತು ಗಣಿಗಾರಿಕೆಯ ಇಲಾಖೆಯವರು ನೀಡುತ್ತಾರೆಂದರೆ ಸರಿ. ಆ ಲಾರಿಯಲ್ಲಿ ಕಲ್ಲನ್ನು ಸಾಗಿಸಲು ಇದ್ದ ಪರವಾನಗಿಯನ್ನು ನಾನು ನೋಡಿಲ್ಲ, ಪ್ರಾಸಾ-1 ರವರು ನೋಡಿರುತ್ತಾರೆ.

ಆ ಲಾರಿಯಲ್ಲಿದ್ದ ಚಾಲಕನನ್ನು ವಶಕ್ಕೆ ಪಡೆದಿಲ್ಲ. ಆ ಲಾರಿಯ ಸಂಖ್ಯೆ ಮಾತ್ರ ನನಗೆ ಗೊತ್ತಿದೆ, ಅದರ ಚಹರೆ ಗೊತ್ತಿಲ್ಲ. ಆ ಕಲ್ಲಿನ ತೂಕ ಎಷ್ಟು ಇತ್ತು ಎಂದು ನಾನು ಖುದ್ದಾಗಿ ನೋಡಿಲ್ಲ.

ಧರ್ಮರಾಯ ದೇವಸ್ಥಾನದ ಹತ್ತಿರ ಬಹಳಷ್ಟು ಜನರ ಗುಂಪು ಇತ್ತು. ಆ ಗುಂಪಿನಲ್ಲಿ ಈ ದಿನ ನ್ಯಾಯಾಲಯದ ಮುಂದಿರುವ ಆರೋಪಿತರು ಇದ್ದರಾ ಎಂದರೆ 1 ನೇ ಆರೋಪಿತ ಮಾತ್ರ ಇದ್ದು, ಇತರ ಆರೋಪಿತರನ್ನು ನಾನು ನೋಡಿಲ್ಲ.

ಸದರಿ ಕ್ವಾಲಿಸ್ ವಾಹನದ ಸಂಖ್ಯೆ ಮತ್ತು ಚಹರೆಯನ್ನು ನನ್ನ ಹೇಳಿಕೆಯಲ್ಲಿ ನೀಡಿಲ್ಲ.

ಈ ಪ್ರಕರಣ ದಾಖಲಿಸುವವರೆಗೂ 1 ನೇ ಆರೋಪಿತನ ಪರಿಚಯ ನನಗೆ ಇರಲಿಲ್ಲ.

1 ನೇ ಆರೋಪಿತ ಎಸೆದ ಎನ್ನಲಾದ ಹಣದಲ್ಲಿ ಎಷ್ಟು ರೂ. ನ ಮುಖಬೆಲೆ ಇತ್ತು ಎಂದು ನನಗೆ ನೆನಪಿಲ್ಲ. ಈ ಪ್ರಕರಣ ದಾಖಲಾಗುವ ವರೆಗೂ ಆ ಹಣ ಅವರ ಬಳಿಯೆ ಇತ್ತು.

ಪ್ರಾಸಾ-1 ರವರು ಆ ದಿನ ಯಾವ ಮೊಬೈಲನ್ನು ಬಳಸುತ್ತಿದ್ದರು ಎಂದು ನನಗೆ ಗೊತ್ತಿಲ್ಲ. ಅದರ ಬೆಲೆ ನನಗೆ ಗೊತ್ತಿಲ್ಲ.

ಗಲಾಟೆಯಲ್ಲಿ ನನ್ನ ಬಟ್ಟೆಗೆ ರಕ್ತಕಲೆಯಾಗಿರಲಿಲ್ಲ. ಪ್ರಾಸಾ-1 ರವರ ಬಟ್ಟೆಗೆ ರಕ್ತಕಲೆಯಾಗಿತ್ತು. ನಾವು ಕಚೇರಿಯಿಂದ ಹೊರಟು ದೂರನ್ನು ಕೊಡುವ ವರೆಗೂ ಪ್ರಾಸಾ-2 ರವರೆ ಜೀಪನ್ನು ಚಾಲನೆ ಮಾಡುತ್ತಿದ್ದರು ಮತ್ತು ಜೀಪಿನ ಕೀ ಅವರ ಬಳಿ ಇತ್ತು. ಸಾಕ್ಷಿಯು ಮುಂದುವರೆದು ಆ ಕೀ ಯನ್ನು 1 ನೇ ಆರೋಪಿತ ಕಸಿದುಕೊಂಡಿರುತ್ತಾನೆಂದು ನುಡಿದಿದ್ದಾರೆ. ಆ ವಿಷಯವನ್ನು ನನ್ನ ಹೇಳಿಕೆಯಲ್ಲಿ ಹೇಳಿಲ್ಲ.

ಮೊದಲು ನಾವು ಠಾಣೆಗೆ ಹೋಗಿ ಆನಂತರ ಆಸ್ಪತ್ರೆಗೆ ಹೋಗಿರುತ್ತೇವೆ. ಠಾಣೆಗೆ ಪ್ರಾಸಾ-1 ರವರು ಹೋಗಿದ್ದು ನಾನು ಹೋಗಿರಲಿಲ್ಲ. ಪ್ರಾಸಾ-1 ರವರ ರಕ್ತದ ಕಲೆಯ ಬಟ್ಟೆಯನ್ನು ಪೊಲೀಸರು ಜಪ್ತು ಪಡಿಸಿಕೊಂಡಿಲ್ಲ. ಸುಮಾರು 1 ವರೆ ಗಂಟೆಗಳ ಕಾಲ ನಾನು ಆಸ್ಪತ್ರೆಯಲ್ಲಿದ್ದೇನು.

ಘಟನೆಯ ವಿಷಯವನ್ನು ನಾನು ನನ್ನ ಮೇಲಾಧಿಕಾರಿಗಳಿಗೆ ತಿಳಿಸಿರುತ್ತೇನೆ. ಆ ಬಗ್ಗೆ ನನ್ನ ಹೇಳಿಕೆಯಲ್ಲಿ ನಮೂದಿಲ್ಲ. ಘಟನೆಯ ಕುರಿತು ಲಿಖಿತವಾಗಿ ಮೇಲಾಧಿಕಾರಿಗಳಿಗೆ ತಿಳಿಸಿಲ್ಲ. ಘಟನೆಯ ನಂತರ ಆ ಲಾರಿ ಯಾರಿಗೆ ಸೇರಿದ್ದು ಮತ್ತು ಆ ಕಲ್ಲನ್ನು ಯಾವ ಕ್ವಾರೆಯಿಂದ ತರಲಾಯಿತು ಎಂಬ ಬಗ್ಗೆ ನಾನು ಮತ್ತು ಪ್ರಾಸಾ-1 ರವರು ದಾಖಲೆಯನ್ನು ಪಡೆದಿಲ್ಲ.

ನಾನು ನಮ್ಮ ಶಾಖಾ ಕಚೇರಿಯಿಂದ ಕನಕಪುರ ವಲಯಕ್ಕೆ ಬಂದಿಲ್ಲ ಎಂದರೆ ಸರಿಯಲ್ಲ. ನಾನು ಬೇಕುಪ್ಪೆ ವೃತ್ತಕ್ಕೆ ಹೋಗಿಲ್ಲ, ಯಾವುದೇ ಲಾರಿಯನ್ನು ತಡೆಗಟ್ಟಿಲ್ಲ, ಧರ್ಮರಾಯ ದೇವಸ್ಥಾನದ ಬಳಿ ಯಾವುದೇ ಗಲಾಟೆಯಾಗಿಲ್ಲ, ಆರೋಪಿತರು ನಮ್ಮ ಕರ್ತವ್ಯಕ್ಕೆ ಅಡ್ಡಿ ಪಡಿಸಿಲ್ಲ, 1 ನೇ ಆರೋಪಿತ ಹಣವನ್ನು ಎಸೆದಿಲ್ಲ ಎಂದರೆ ಸರಿಯಲ್ಲ.

ಆರೋಪಿತರು ಮತ್ತು ಈ ಪ್ರಕರಣಕ್ಕೂ ಯಾವುದೇ ಸಂಬಂಧವಿಲ್ಲದಿದ್ದರೂ ಪ್ರಾಸಾ-1 ರವರ ಮಾತಿನ ಮೇರೆಗೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಆರೋಪಿತರು ಒಂದು ಪಕ್ಷದ ಮುಖಂಡರಾಗಿದ್ದು, ಬೇರೊಂದು ಪಕ್ಷದ ಮುಖಂಡರ ಮಾತಿನ ಮೇರೆಗೆ ಯಾವುದೇ ಘಟನೆ ಜರುಗದಿದ್ದರೂ, ಅವರ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರುವಿಚಾರಣೆ ಃಇಲ್ಲ**

**(ಸಾಕ್ಷಿಯ ವಿಚಾರಣೆಯನ್ನು ನಾನು ತೆರೆದ ನ್ಯಾಯಾಲಯದಲ್ಲಿ ಪಡೆದುಕೊಂಡಿರುತ್ತೇನೆ ಎಂದು ದೃಡಿಕರೀಸುತ್ತೇನೆ.)**

**ಪ್ರಧಾನ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆಎಂಎಫ್‌ಸಿ ಕನಕಪುರ.**

**ಓ ಹೇ ಕೇ ಸ ಇ**